ಪಿಡಬ್ಲ್ಯುಃ 2

ದಿನಾಂಕ ಃ 28-10-2017 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

ಪಾಟೀ ಸವಾಲು ಃ 2ನೇ ಪ್ರತಿವಾದಿ ಪರ , ಶ್ರೀ ಟಿಎಸ್‌ಕೆ ವಕೀಲರಿಂದ ,

ನಾನು ದಾವಾ ಸ್ವತ್ತು ಖರೀದಿಸುವಾಗ ಅದರ ಬಗ್ಗೆ ವಿಚಾರಿಸಿದ್ದೇನೆ. ನಾನು ವಿಚಾರಿಸಿದಾಗ ಸದರಿ ಸ್ವತ್ತಿನ ಅಳತೆ 30 X 40 ಅಡಿ ಇತ್ತು. ಮೂಲತಃ ದಾವಾ ಸ್ವತ್ತಿನ ಮಾಲಿಕರ ಹೆಸರು ಗೊತ್ತಿಲ್ಲ ನನ್ನ ಗಂಡನಿಗೆ ಗೊತ್ತು . ಮೂಲತಃ ದಾವಾ ಸ್ವತಿನ ಮಾಲಿಕರ ಬಳಿ ಸ್ವತ್ತಿನ ಅಳತೆ ಎಷ್ಟು ಇತ್ತು ಗೊತ್ತಿಲ್ಲ.

ದಾವಾ ಸ್ವತ್ತು ಖರೀದಿಸುವಾಗ ಒಂದು ಸಣ್ಣ ಗುಡಿಸಲು ಇತ್ತು ಅಂದರೆ ಸರಿ . ದಾವಾ ಖರೀದಿಸುವಾಗ 30 X 40 ಅಡಿ ಇತ್ತು. ನಾನು ದಾವಾ ಸ್ವತ್ತಿನ ಮೂಲ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಕಿದ್ದೇವೆ. ನಾನು ದಾವಾ ಸ್ವತ್ತು ಖರೀದಿಸುವಾಗ ಹೋಟಲ್ ವ್ಯವಹಾರದಿಂದ ಜೀವನ ನಿರ್ವಹಣೆ ಮಾಡುತ್ತಿದ್ದೆ. ನಾನು ಚೀಟಿ ವ್ಯವಹಾರವು ಮಾಡುತ್ತಿದ್ದೆ ಅಂದರೆ ಸರಿಯಲ್ಲ.

ನಾನು ಕ್ರಯದ ಕರಾರು ಪತ್ರ ಬರೆದುಕೊಡುವಾಗ ಸ್ವತ್ತು 30 X 40 ಅಡಿ ಇತ್ತು ಮತ್ತು ಅದರಲ್ಲಿ ಗುಡಿಸಲು ಇತ್ತು ಅಂದರೆ ಸರಿ. ನಾನು ಕ್ರಯದ ಕರಾರು ಪತ್ರ ರದ್ದು ಮಾಡದೆ ನನ್ನ ಗಂಡನಿಗೆ ದಾನ ಪತ್ರ ಬರೆದುಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ದಾನ ಪತ್ರ ದಲ್ಲಿ ಸ್ವತ್ತಿನ ವಿಸ್ತೀರ್ಣ 40 X 60 ಅಡಿ ಬರೆಸಿದ್ದೇನೆ ಅಂದರೆ ಸರಿಯಲ್ಲ. 30 X 40 ಅಡಿ ಎಂದು ಬರೆಸಿದ್ದೇನೆ ಎಂದು ಸಾಕ್ಷಿ ಸ್ವತಃ ಉತ್ತರಿಸುತ್ತಾರೆ. ನಂತರ ನಾನು ಸುವರ್ಣ ಪತ್ರದಲ್ಲಿ 40 X 45 ಅಡಿ ಎಂದು ಬರೆಸಿದ್ದೇವೆ ಅಂದರೆ ಸರಿಯಲ್ಲ. ನಾನು ಚೀಟಿ ವ್ಯವಹಾರದಲ್ಲಿ ನಷ್ಟ ಉಂಟಾಗಿದ್ದರಿಂದ ದಾವಾ ಸ್ವತ್ತನ್ನು ಮಾರಾಟ ಮಾಡಲು ಕ್ರಯದ

ಕರಾರು ಪತ್ರ ಬರೆದುಕೊಟ್ಟಿದ್ದೆ ಅಂದರೆ ಸರಿಯಲ್ಲ. ಹಾಗೂ ಆ ಹಣದಿಂದ ಚೀಟಿದಾರರ ಸಾಲವನ್ನು ತೀರಿಸಿದ್ದೇನೆ ಅಂದರೆ ಸರಿಯಲ್ಲ. ನಿಪಿ 53 ರಲ್ಲಿ ಶರಣಮ್ಮ ಎಂದಿರುವ ಹೆಸರು ನನ್ನದೆ ಅಂದರೆ ಸರಿ . ಆದರೆ ಆ ದಾಖಲೆಯಲ್ಲಿ ಏನು ಬರೆದಿದೆ ಗೊತ್ತಿಲ್ಲ. ನಾನು ಮತ್ತು ನನ್ನ ಗಂಡ ಇಬ್ಬರು ಸೇರಿ ದಾವಾ ಸ್ವತ್ತನ್ನು ಮಾರಾಟ ಮಾಡಿ ಈಶ್ವರಮ್ಮನವರಿಗೆ ಖರೀದಿ ಪತ್ರ ಬರೆದುಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಹಾಗೂ ಆ ಹಣದಿಂದ ಸಾಲ ತೀರಿಸಿದ್ದೇನೆ ಅಂದರೆ ಸರಿಯಲ್ಲ.

ಕೃಷ್ಣ ಸಿಂಗ್‌ರವರು ನನ್ನ ಮೇಲೆ ಕೇಸ್ ಹಾಕಿದ್ದಾರೆ ಅಂದರೆ ಸರಿ ಆದರೆ ಅದು ಸುಳ್ಳು ಈಶ್ವರಮ್ಮನವರು ಆ ಕೇಸ್‌ನ್ನು ಹಾಕಿಸಿದ್ದಾರೆ ಎಂದು ಸಾಕ್ಷಿ ಸ್ವತಃ ಉತ್ತರಿಸುತ್ತಾರೆ.

ಕೃಷ್ಣ ಗುಪ್ತ ನಿಮ್ಮ ಮೇಲೆ ಕೇಸ್ ಹಾಕಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸುಳ್ಳು ಕೇಸ್ ಬಸವರಾಜ ಹಾಕಿಸಿದ್ದಾರೆ ಎಂದು ಸಾಕ್ಷಿ ಸ್ವತಃ ಉತ್ತರಿಸುತ್ತಾರೆ. ಒಬ್ಬ ಪಿ.ಮೈನಾವತಿ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ ನನ್ನ ಮೇಲೆ ವಂಚನೆ ಪ್ರಕರಣ ದಾಖಲಿಸಿದ್ದಾರೆ ಅಂದರೆ ಸರಿ . ಆದರೆ ಬಸವರಾಜ ಮತ್ತು ಈಶ್ವರಮ್ಮ ಹಾಕಿಸಿದ್ದಾರೆ ಎಂದು ಸಾಕ್ಷಿ ಸ್ವತಃ ಉತ್ತರಿಸುತ್ತಾರೆ. ನಾವು ಹೆಚ್ಚಿನ ಆಸ್ತಿಯ ವಿಸ್ತೀರ್ಣ ತೋರಿಸಿ ದುರ್ಲಾಭ ಪಡೆದಿದ್ದೇವೆ ಅಂದರೆ ಸರಿಯಲ್ಲ. ದಾವಾ ಸ್ವತ್ತು ಮಾರುವಾಗ ಕಟ್ಟಡ ಇರಲಿಲ್ಲ ಅಂದರೆ ಸರಿಯಲ್ಲ. 2012 ರಲ್ಲಿ ಕಟ್ಟಲು ಆರಂಭಿಸಿ ಸುಮಾರು 8-9 ತಿಂಗಳಲ್ಲಿ ಮುಗಿಸಿದ್ದೇವೆ. ಸೀನಪ್ಪ ಮೇಸ್ತ್ರಿ ಕಟ್ಟಡ ಕಟ್ಟಿದ್ದಾರೆ. ಅವರೆ ಸ್ವತ್ತು ಕಟ್ಟಿದ್ದಾರೆ ಎನ್ನಲು

ಯಾವುದೇ ದಾಖಲೆ ಸಲ್ಲಿಸಿಲ್ಲ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಸುಜಾತರವರೆ ಇದ್ದಾರೆ ಅಂದರೆ ಸರಿಯಲ್ಲ



ಸುಜಾತರವರೆ ಕಟ್ಟಡ ಕಟ್ಟಿದ್ದಾರೆ ಅಂದರೆ ಸರಿಯಲ್ಲ. ದಾವಾ ಸ್ವತ್ತಿನ ದಾಖಲೆಗಳು ನಗರ ಸಭೆಯಲ್ಲಿ 2ನೇ ಪ್ರತಿವಾದಿಯ ಹೆಸರಿಗೆ ಇವೆ ಅಂದರೆ ಸರಿಯಲ್ಲ. ಸುಜಾತರವರು ಕಟ್ಟಿದ ಕಟ್ಟಡವನ್ನು ಹೊಡೆದು ಕೊಳ್ಳಲು ಸುಳ್ಳು ಪ್ರಕರಣ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ ಗಂಡನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

**( ನನ್ನ ಹೇಳಿಕೆಯಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ

ಸಿನಿಯರ್ ಸಿವಿಲ್ ಜಡ್ಜ್ , ಸಿರುಗುಪ್ಪ.